

ಮಾತನಾಡಿ ಇವನು ಪಂಟರ್ ಆಗಿ ಹೋಗಿದ್ದಾನೆ. ಇವನ ತಿಳಿವಳಿಕೆಯ ಮಟ್ಟ ಮತ್ತು ಕಪ್ಪೆಗಳ ಕುರಿತ ಕಾಳಜಿ ಕೊಂಚ ಅತಿ ಎನ್ನುವಷ್ಟು ಹೆಚ್ಚಾಗಿತ್ತು. ರೂಲ್ಸ್ ಹೇಳುವುದರಲ್ಲೇ ಅವನು ಬಹುಪಾಲು ಸಮಯವನ್ನು ವ್ಯಯ ಮಾಡುತ್ತಿದ್ದನು. ಇವನ ಮಾತುಕತೆ ಬೋರಿಂಗ್ ಆದ ಕೂಡಲೇ ನಾವು ನಗು ಮೊಗದ ಅವನ ಹೆಂಡತಿಯ ಬಳಿ ವಿಷಯ ತಿಳಿಯಲು ತೆರಳುತ್ತಿದ್ದೆವು. ಆಕೆ ಇವನಷ್ಟು ಉರಿಮುಖದವಳಲ್ಲ. ಎಲ್ಲವನ್ನೂ ನಗುನಗುತ್ತಾ ಪ್ರೈಮರಿ ಸ್ಕೂಲ್ ಟೀಚರಂತೆ ಹದವಾಗಿ, ಮೃದುವಾಗಿ ವಿವರಿಸುತ್ತಿದ್ದಳು.

ನಮಗೆ ಸರೋವರ ಬಳಿ ಕೂರುವಂತೆ ಆತ ಹೇಳಿದ. ಯಾರೂ ಇಲ್ಲಿಂದ ಮುಂದೆ ನಡೆದು ಬರಬೇಡಿ. ನಿಮ್ಮ ಕಾಲಿಗೆ ಸಿಕ್ಕು ಈ ಅಪರೂಪದ ಜೀವ ಸಂಕುಲ ಸಾಯಲೂಬಹುದು. ನಾವಿಬ್ಬರು ಹುಡುಕಿ ನಿಮಗೆ ಕರೆಯುವ ತನಕ ಯಾರೂ ಅವಸರ ಮಾಡಬೇಡಿ ಎಂದು ಹೇಳಿ ಗಂಡ ಹೆಂಡತಿ ಮಂಜಿನಿಂದ ಕವಿದ ಹುಲ್ಲುಗಾವಲಿನಲ್ಲಿ ಕಣ್ಮರೆಯಾದರು. ನಾವು ಆ ತಿಳಿ ನೀರ ಸರೋವರದ ಅಂದ ನೋಡುತ್ತಾ ಕೂತೆವು. ಅರ್ಧ ಗಂಟೆ ಕಳೆಯುವುದರೊಳಗೆ ಒಂದು ಹಸಿರು ಹುಲ್ಲು ದಂಟನ್ನು ಅವನು ಹಿಡಿದು ಬಂದ. ನಾವು ಕುತೂಹದಿಂದ ಕಾಯುತ್ತಿದ್ದ ರಾರ್ಚೆಸ್ಟೆಸ್ ರೆಸ್ಪ್ಲೆಂಡೆನ್ಸ್ ಎಂಬ ಬಣ್ಣದ ಕಪ್ಪೆ ಅದರ ಮೇಲೆ ಕೂತಿತ್ತು. ಚಿನ್ನದ ಮೊಟ್ಟೆಗಳ ಚಿತ್ರ ಹೊಟ್ಟೆಯ ಕೆಳಗೆ ಬರೆಸಿಕೊಂಡಿರುವ ನಸು ಕೆಂಬಣ್ಣದ ಈ ಕಪ್ಪೆ ನೋಡಿ ನಮಗಾದ ಸಂತಸ ಅಷ್ಟಿಷ್ಟಲ್ಲ. ಪಡಿಪಾಟಲು ಬಿದ್ದು ಬಂದಿದ್ದು ಈಗ ಸಾರ್ಥಕ ಎನಿಸತೊಡಗಿತು. ಅದರ ಚಿತ್ರಗಳ ಜೋಪಾನವಾಗಿ ತೆಗೆದೆವು. ಅದನ್ನೊಮ್ಮೆ ಮುಟ್ಟುವ ಆಸೆ ಹುಟ್ಟಿತಾದರೂ ರಂಜೀತ್ ಈ ಅವಕಾಶವನ್ನು ನಮಗೆ ಕೊಡಲಿಲ್ಲ. 'ಇಡೀ ಜಗತ್ತಿನಲ್ಲಿ ಇಲ್ಲಿ ಮಾತ್ರ ಇರುವ ಈ ಅಪರೂಪದ ಜೀವಗಳು ವಜ್ರ ವೈಡೂರ್ಯಕ್ಕಿಂತ ಬೆಲೆಬಾಳುವಂಥವು. ಇವುಗಳ ಸಂತತಿ ಎಂದೂ ಹಾಳಾಗಬಾರದು. ಹೀಗಾಗಿ ತುಂಬಾ ಜಾಗ್ರತೆ ವಹಿಸುತ್ತೇವೆ ಬೇಸರವಾಗಬೇಡಿ' ಎಂದ.

ಮೂನಾರಿನ ಓಡಾಟದಲ್ಲಿ ನಮಗೆ ಸಿಕ್ಕವು ನಕ್ಷತ್ರಕಣ್ಣಿನ ಹಸಿರುಕಪ್ಪೆ, ಜೋರ್ಡಾನ್ ಕಿರುಮೂತಿ ಕಪ್ಪೆ, ಮಲಬಾರ್ ಗ್ಲೈಡಿಂಗ್, ಸಣ್ಣ ಮರಗಪ್ಪೆ ಮಾತ್ರ. ಕೊನೆಗೂ ಸಿಗದೇ ಹೋದ ಅನೇಕ ಕಪ್ಪೆಗಳು ಅಲ್ಲೇ ಉಳಿದಿವೆ. ಇವನ್ನೆಲ್ಲಾ ಹುಡುಕಿ ಚಿತ್ರ ತೆಗೆಯಲು ಅನೇಕ ವರ್ಷ ಅಲ್ಲಿಗೆ ಅಲೆದಾಡಬೇಕು. ಇವುಗಳಲ್ಲಿ ನಕ್ಷತ್ರಕಣ್ಣಿನ ಮರಗಪ್ಪೆ, ಮಲಬಾರ್ ಟೋರೆಂಟ್, ಕೋಯ್ನ ಹಳದಿಗಪ್ಪೆ, ಕೆಂಪು ಮುಖದ ಕಪ್ಪೆ, ಮಲಬಾರ್ ಬಲೂನ್ ಕಪ್ಪೆ, ಇನ್ನೂ ಸಿಗದೆ ಕನಸಾಗೇ ಉಳಿದ ಗೆಲಾಕ್ಸಿ ಎಂಬ ಸುಂದರ ಕಪ್ಪೆ ಮುಖ್ಯವಾದವು. ಕೆಲ ಬಣ್ಣದ ಕಪ್ಪೆಗಳು ನೋಡಲು ಸುಂದರವಾಗಿರುತ್ತವೆ. ಆದರೆ ಅಷ್ಟೇ ವಿಷಕಾರಿ ಕೂಡ ಆಗಿರುತ್ತವೆ. 'ಮುಟ್ಟುವ ಮೊದಲು ಅದರ ಗುಣ ಸ್ವಭಾವ ಗೊತ್ತಿರಬೇಕು. ಸಿಕ್ಕ ಕಪ್ಪೆಗಳನ್ನೆಲ್ಲಾ ಕೈಯಲ್ಲಿ ಹಿಡಿಯಲು ಹೋಗಬೇಡಿ' ಎಂದು ರಂಜೀತ್ ಎಚ್ಚರಿಸಿದ.

ಸ್ವಚ್ಛಗಾಳಿ, ಕಣ್ಣಿಗೆ ಹಿತ ಕೊಡುವ ಹಸಿರು, ಜುಳುಜುಳು ಹರಿವ ಸಣ್ಣ ತೊರೆಗಳು, ತೇಲಾಡಿ ಬಂದು ಸಾಗುವ ಮೋಡಗಳು, ನೀಲಿ ಸರೋವರ, ಥರಾವರಿ ಹಕ್ಕಿಗಳ ಬಿಡುವಿಲ್ಲದ ನಿನಾದ, ಸಣ್ಣ ಕರ್ಕಶ ಶಬ್ದದ ಸೋಂಕು ಮುಟ್ಟದ ಈ ದೇವ ಕಾಡಿನಲ್ಲಿ ಹೀಗೆ ಇದ್ದು ಬಿಡಬೇಕು ಎನ್ನುವ ಮನಸ್ಸಾಗುತ್ತಿತ್ತು. ಹೊರಡುವ ಮನಸ್ಸೇ ಇಲ್ಲದೆ ಜೀಪು ಹತ್ತಿದೆವು.

●